**ದಿನಾಂಕಃ 18.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃದೂರುದಾರರ ಪರ ವಕೀಲರಿಂದಃ**

ವಿ. ರಾಧಕೃಷ್ಣನ್ ರವರನ್ನು ಮೊದಲನೆ ಬಾರಿಗೆ ಅವರ ಕಚೇರಿಯಲ್ಲಿ ನೋಡಿರುತ್ತೇನೆ. ಅವರು ಪಿರ್ಯಾದುದಾರರ ಜಿಪಿಎ ಹೋಲ್ಡರ್ ಆಗಿರುತ್ತಾರೆ. ಅವರನ್ನು ನಾನು 10 ವರ್ಷಗಳಿಂದ ನೋಡಿರುತ್ತೇನೆ. ಅವರು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ರಾಧಕೃಷ್ಣನ್ ರವರು ಪಿರ್ಯಾದುದಾರರ ಲೆಕ್ಕ ಪತ್ರಗಳ ವ್ಯವಹಾರವನ್ನು ನೋಡಿಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಅವರ ಕಚೇರಿಗೆ ಹೋದಾಗ ರಾಧಕೃಷ್ಣನ್ ಕಚೇರಿಗೆ ಬಂದವರಿಗೆ ಕಾಫಿ-ಟೀ ಕೊಡುತ್ತಿದ್ದರು. ಆಗ ಅವರು ಯಾರು ಎಂದು ನಾನು ತಿಳಿದುಕೊಳ್ಳಲಿಲ್ಲ.

ಪಿರ್ಯಾದುದಾರರು ಹಾಜರುಪಡಿಸಿರುವ ದಾಖಲೆಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ನಿ.ಪಿ.1 ಜಿಪಿಎ ಆಗಿರುತ್ತದೆ. ಪಿರ್ಯಾದುದಾರರಿಗೆ 72 ವರ್ಷ ವಯಸ್ಸಾಗಿರುತ್ತದೆ ಎಂದರೆ ಇರಬಹುದು. 2020 ನೇ ಇಸವಿಯಲ್ಲಿ ಪಿರ್ಯಾದುದಾರರನ್ನು ಕೊನೆಯ ಬಾರಿಗೆ ಭೇಟಿ ಮಾಡಿದ್ದೇನೆ. ಪಿರ್ಯಾದುದಾರರ ಆರೋಗ್ಯದ ಬಗ್ಗೆ ನನಗೆ ಗೊತ್ತಿಲ್ಲ. ಅವರಿಗೆ ಅನಾರೋಗ್ಯವಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದುದಾರರಿಗೆ ಅನಾರೋಗ್ಯವಿದ್ದ ಕಾರಣ ರಾಧಕೃಷ್ಣನ್ ರವರಿಗೆ ಜಿಪಿಎ ನೀಡಿರುತ್ತಾರೆ ಎಂದರೆ ಜಿಪಿಎ ನೀಡಿರುವ ಬಗ್ಗೆ ತಿಳಿದಿರುತ್ತದೆ, ಆದರೆ ಅವರ ಅನಾರೋಗ್ಯದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

10 ಲಕ್ಷ ರೂ.ಗಳನ್ನು ಬ್ಯಾಂಕಿನಿಂದ ಹಿಂಪಡೆದು ರಾಧಕೃಷ್ಣನ್ ರವರಿಗೆ ಹಣ ನೀಡಿರುತ್ತೇನೆ ಎಂದು ಎಂದಿಗಾದರೂ ನಿಮ್ಮ ವಕೀಲರಿಗೆ ಮಾಹಿತಿ ನೀಡಿದ್ದೀರಾ ಎಂದರೆ ಮಾಹಿತಿ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಪಾಟೀ ಸವಾಲಿನಲ್ಲಿ ರಾಧಕೃಷ್ಣನ್ ರವರಿಗೆ 10 ಲಕ್ಷ

**ಡಿಡಬ್ಲ್ಯೂ.1: ಪಿ. ಶೇಷಾದ್ರಿ.,**

ರೂ. ಹಣ ನೀಡಿರುತ್ತೇನೆ ಎಂದು ಪ್ರತಿಪಾದಿಸುತ್ತೀರಿ ಎಂದರೆ ನಮ್ಮ ವಕೀಲರ ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. 2020 ನೇ ಇಸವಿಯಿಂದ ನಾನು ತೆರಿಗೆ ಪಾವತಿದಾರನಾಗಿರುವುದಿಲ್ಲ. ನಿಮ್ಮ ಹಾಗೂ ಪಿರ್ಯಾದುದಾರರ ನಡುವೆ ವ್ಯವಹಾರಗಳಿದ್ದ ಬಗ್ಗೆ ದಾಖಲೆಗಳಿವೆಯೇ ಎಂದರೆ ಸಾಕ್ಷಿಯು ದಾಖಲೆಗಳಿರುವುದಿಲ್ಲ ಎಂದು ನುಡಿಯುತ್ತಾರೆ.

ಚೆಕ್ಕುಗಳು ದುರುಪಯೋಗವಾಗಿರುವ ಬಗ್ಗೆ ನಾನು ಪ್ರಕರಣ ದಾಖಲಿಸಿರುವುದಿಲ್ಲ. ಚೆಕ್ಕುಗಳನ್ನು ಹಿಂದಿರುಗಿಸಿ ಎಂದು ನಾನು ಲಿಖಿತವಾಗಿ ಕೋರಿಕೊಂಡಿರುವುದಿಲ್ಲ. 10 ಚೆಕ್ಕುಗಳಲ್ಲಿರುವ ಎಲ್ಲಾ ಸಹಿಗಳು ನಿಮ್ಮದಾಗಿರುತ್ತವೆ ಎಂದರೆ ಸರಿ. ಪಿರ್ಯಾದುದಾರರಿಗೆ 15 ಲಕ್ಷ ರೂ. ಹಣ ನೀಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.